<u>1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

**<u>ಸಿ.ಸಿ. ಸಂಖ್ಯೆಃ510/2023</u>**

**ಸಾಕ್ಷಿಯನ್ನು ದಿಃ 09.07.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ತೇಜಸ್ ಕುಮಾರ್ | ಸಿಡಬ್ಲ್ಯೂಃ9 | ಪಿಡಬ್ಲ್ಯೂಃ8 |
| ತಂದೆಯ ಹೆಸರು | ಲೇಟ್ ನಾಗನಾಯಕ | | |
| ವಯಸ್ಸು | 28 ವರ್ಷ | | |
| ಉದ್ಯೋಗ | ಚಾಲಕ | | |
| ವಾಸಸ್ಥಳ | ಬಿಳಿಕೆರೆ | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ನಿಪಿ.12 ಮತ್ತು 13 ಸ್ಥಳ ಮಹಜರ್ ಮತ್ತು ನಕ್ಷೆ ಯಲ್ಲಿ ಇರುವ ಸಾಕ್ಷಿ ಅವರ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಪಿ.12 ಬಿ ಮತ್ತು 13 ಬಿ** ಎಂದು ಗುರುತಿಸಲಾಯಿತು . ಸದರಿ ಸಹಿಗಳನ್ನು ದಿಃ 28.06.2022 ರಂದು ಸಂಜೆ 04.00 ಗಂಟೆ ಸಮಯದಲ್ಲಿ ಮಲ್ಲಿನಾಥ್ ಪುರ ಹತ್ತಿರ ಅಪಘಾತವಾದ ಸಂಬಂಧ ಪೊಲೀಸರು ಮಹಜರ್ ಮಾಡುತ್ತಿದ್ದು , ಆ ಸಮಯದಲ್ಲಿ ನಾನು ಸಹಿ ಮಾಡಿರುತ್ತೇನೆ . ನನ್ನ ಜೊತೆ ಚಾಸಾ 5 ಮತ್ತು 10 ರವರು ಇದ್ದರು . ಮಹಜರನ್ನು ಸಂಜೆ 04.00-04.45 ರ ವರೆಗೆ ಮಾಡಿ ಸ್ಕೆಚನ್ನು ಮಾಡಿರುತ್ತಾರೆ . ಆ ಸಮಯದಲ್ಲಿ 2 ಫೋಟೋಗಳನ್ನು ತೆಗೆದಿರುತ್ತಾರೆ . ನಿಪಿ.17 ಮತ್ತು 18 ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಅಲ್ಲಿಂದ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಅಲ್ಲಿ ಒಂದು ಬಸ್ ಮತ್ತು ಟೆಂಪೋಗಳನ್ನು ಮಹಜರ್ ಮಾಡಿ ಅಮಾನತ್ತು ಪಡಿಸಿಕೊಂಡಿರುತ್ತಾರೆ . ನಿಪಿ.14 ರಲ್ಲಿ ಇರುವ ಸಾಕ್ಷಿ ಅವರ ಸಹಿಯನ್ನು ನೋಡಿ ಗುರುತಿಸಿದ್ದು , ಸದರಿ ಸಹಿಯನ್ನು **ನಿಪಿ. 14 ಬಿ** ಎಂದು ಗುರುತಿಸಲಾಯಿತು . ಆ ಸಮಯದಲ್ಲಿ

2 ಪೊಟೋಗಳನ್ನು ತೆಗೆದಿರುತ್ತಾರೆ . ನಿಪಿ.15 ಮತ್ತು 16 ಪೊಟೋಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆಗ ಸಮಯ ಸುಮಾರು 05.00–05.30 ಆಗಿತ್ತು .

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಆರ್ ವಕೀಲರಿಂದಃ**

ಮಹಜರ್ ಗೆ ಬರುವಂತೆ ಪೊಲೀಸರು ನನಗೆ ನೋಟೀಸನ್ನು ಕೊಟ್ಟಿರಲಿಲ್ಲ , ಪೊಲೀಸ್ ಠಾಣೆಯ ಬಳಿ ನನ್ನ ಮನೆ ಇದ್ದು ನಾನು ಬಿಳಿಕೆರೆಯಲ್ಲಿಯೇ ಇದ್ದೆ . ಮಹಜರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ . ಮಹಜರ್ ಸ್ಥಳದ ಚೆಕ್ಕು ಬಂದಿ ನನಗೆ ಹೇಳಲು ಈಗ ಆಗುವುದಿಲ್ಲ . ಮಹಜರ್ ಮಾಡಲು ಬರಬೇಕು ಎಂದು ಮಧ್ಯಾಹ್ನದ ವೇಳೆ ನನಗೆ ಹೇಳಿದ್ದರು . ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ , ಠಾಣೆಯಲ್ಲಿಯೇ ಮಹಜರ್ ಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ . ಅಪಘಾತದಲ್ಲಿ ಮೃತ ಪಟ್ಟವರ ಕುಟುಂಬಕ್ಕೆ ಪರಿಹಾರ ಸಿಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಅಮಾನತ್ತು ಪಡಿಸಿಕೊಂಡ ವಾಹನದ ಸಂಖ್ಯೆಗಳು ನನಗೆ ಗೊತ್ತಿಲ್ಲ .

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.